Misc 63/2022
PW-1

ಸಾಕ್ಷಿಯನ್ನು ಈ ದಿನ ದಿನಾಂಕ 26.03.2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟೀ ಸವಾಲುಃ **1** ರಿಂದ **4** ನೇ ಎದುರುದಾರರ ಪರವಾಗಿಃ ಶ್ರೀ ಎಸ್ ಎಸ್ ಪಾಟೀಲ ವಕೀಲರಿಂದಃ

ನಾನು ಸಿವಿಲ್ ಇಂಜಿನಿಯರಿಂಗನಲ್ಲಿ ಡಿಪ್ಲೊಮಾ ಓದಿರುತ್ತೇನೆ. ನಾನು ನನ್ನ ತಂದೆ ಮಾಡಿರುವ ಒಂದು ಟ್ರಸ್ಟಗೆ ಚೇರಮೆನ್ ಆಗಿ ಸ್ಕೂಲ್ ನಡೆಸುತ್ತಿದ್ದೇನೆ. ನಾನು ಬೇರೆ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಹಳ್ಳಿಯಲ್ಲಿ ಜಮೀನು ಇದೆ. ಸದರಿ ಜಮೀನಿನಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ. ನನ್ನ ತಂದೆ ಇದ್ದಾಗಲೂ ಮತ್ತು ಅವರು ತೀರಿಕೊಂಡ ನಂತರವೂ ಈ ತನಕ ನಾನು ರಾಮದುರ್ಗದಲ್ಲಿ ಅನೇಕ ವ್ಯಾಪಾರ-ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಅರ್ಜಿಯನ್ನು ಸಲ್ಲಿಸಲು ನಾನೇ ಸ್ವಂತ ಮಾಹಿತಿ ನೀಡಿರುತ್ತೇನೆ. ನನ್ನ ತಂದೆ **2008** ರಲ್ಲಿ ತೀರಿಕೊಂಡಿದ್ದು ಎಂದರೆ ಸರಿ. ನನ್ನ ತಂದೆಗೆ ನಾನು ಸೇರಿ ಎರಡು ಜನ ಗಂಡುಮಕ್ಕಳು ಮತ್ತು ಎರಡು ಜನ ಹೆಣ್ಣುಮಕ್ಕಳು. ನನ್ನ ತಮ್ಮ ಸುರೇಶ ಒಂದನೇ ಎದುರುದಾರರ ಗಂಡ ಎಂದರೆ ಸರಿ. ಸದರಿ ಸುರೇಶ ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರೂ ಹೆಂಡತಿಯರು ಎಂದರೆ ಸರಿಯಲ್ಲ. ಗೌರಮ್ಮ ನನ್ನ ತಾಯಿ ಎಂದರೆ ಸರಿ. ಸದರಿ ಗೌರಮ್ಮ ನಾವು ನಾಲ್ಕು ಜನ ಮಕ್ಕಳಿಗೂ ತಾಯಿಯಾಗಿರುತ್ತಾರೆ. ಶಾಂತಮ್ಮ ಎನ್ನುವವರು ನನ್ನ ತಂದೆಯ ಎರಡನೇ ಹೆಂಡತಿ ಮತ್ತು ಅವರಿಗೆ ಮಕ್ಕಳಾಗಿರಲಿಲ್ಲ ಎಂದರೆ ಸರಿಯಲ್ಲ.

ಮೂರನೇ ಅರ್ಜಿದಾರರು ನನ್ನ ಅಕ್ಕ ಅವರನ್ನು ಪ್ರಸನ್ನ ಎನ್ನುವವರಿಗೆ ಮದುವೆ ಮಾಡಿಕೊಟ್ಟಿದ್ದು ಎಂದರೆ ಸರಿ. ಸದರಿ ಪ್ರಸನ್ನ ನಮ್ಮ ಸೋದರಮಾವ ಎಂದರೆ ಸರಿಯಲ್ಲ. ಸದರಿ ಪ್ರಸನ್ನ ಈ ಮೇಲೆ ಹೇಳಿರುವ ಶಾಂತಮ್ಮ ಅವರ ತಮ್ಮ ಎಂದರ ಸರಿ. **1** ರಿಂದ **4** ನೇ ಎದುರುದಾರರು ಈಗ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ. ಒಂದನೇ ಅರ್ಜಿದಾರರ

ಟ್ರಸ್ಟನ್ನು ನನ್ನ ತಂದೆ ಬದುಕಿದ್ದಾಗ ನನ್ನ ತಂದೆ ಮತ್ತು ನನ್ನ ತಮ್ಮ ಸುರೇಶ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರ ಟ್ರಸ್ಟನ ಎಲ್ಲಾ ವ್ಯವಹಾರಗಳನ್ನು, ಆಡಳಿತವನ್ನು ಮತ್ತು ಟ್ರಸ್ಟಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ನನ್ನ ತಮ್ಮ ಸುರೇಶ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ.

ಒಂದನೇ ಎದುರುದಾರಳು ನನ್ನ ಅಕ್ಕ ಮೂರನೇ ಅರ್ಜಿದಾರಳ ಮಗಳು ಎಂದರೆ ಸರಿ. ಸುರೇಶನ ಮದುವೆಯಾದ ನಂತರ ಆತನನ್ನು ಕೆಲಸಕ್ಕಾಗಿ ನಾನು ಬೆಂಗಳೂರಿಗೆ ಕಳುಹಿಸಿದ್ದು ಎಂದರೆ ಸರಿಯಲ್ಲ. ಸುರೇಶನು ಬೆಂಗಳೂರಿನಲ್ಲಿ ಯುನಿವರಸಲ್ ಸೈಬರ್ ಸೆಂಟರ ಎಂಬ ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿ. **2000** ರಿಂದ **2008** ರವರೆಗೆ ಸುರೇಶ ಮತ್ತು ಆತನ ಹೆಂಡತಿ ಒಂದನೇ ಎದುರುದಾರಳು ಬೆಂಗಳೂರಿನಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಳು ಎಂದರೆ ಸರಿ.

**2008** ರಲ್ಲಿ ನನ್ನ ಮತ್ತು ನನ್ನ ತಂದೆಯ ಮಧ್ಯೆ ಜಗಳವಾಗಿ ನಾನು ನನ್ನ ತಂದೆಯನ್ನು ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂದೆಯ ಮಧ್ಯೆ ಸಂಬಂಧ ಸರಿ ಇರಲಿಲ್ಲ ಮತ್ತು ಈ ಕಾರಣದಿಂದ ನನ್ನ ತಂದೆ ನನ್ನನ್ನು ಒಂದನೇ ಅರ್ಜಿದಾರ ಟ್ರಸ್ಟನ ಯಾವುದೇ ವ್ಯವಹಾರದಲ್ಲಿ ಸೇರಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಒಂದನೇ ಎದುರುದಾರ ಟ್ರಸ್ಟನ ವ್ಯವಹಾರವನ್ನು ಸುರೇಶ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನನ್ನು ಒಂದನೇ ಅರ್ಜಿದಾರ ಟ್ರಸ್ಟನ ವ್ಯವಹಾರದಲ್ಲಿ ನನ್ನ ತಂದೆ ಸೇರಿಕೊಂಡಿರಲಿಲ್ಲ ಎನ್ನುವ ಕಾರಣಕ್ಕೆ ನಾನು ನನ್ನ ತಂದೆಯನ್ನು ಮನೆಯಿಂದ ಹೊರಗೆ ಹಾಕಿದ್ದೆ ಎಂದರೆ ಸರಿಯಲ್ಲ. ಈ ರೀತಿ ನಾನು ನನ್ನ ತಂದೆಯನ್ನು ಮನೆಯಿಂ ಹೊರಗೆ ಹಾಕಿದ್ದೆ ಮತ್ತು ನಂತರ ನನ್ನ ತಂದೆ ಬೆಂಗಳೂರಿನಲ್ಲಿ ನನ್ನ ತಮ್ಮ ಸುರೇಶನ ಜೊತೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆದರೆ ನನ್ನ ತಂದೆ ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ವಾಸಮಾಡುತ್ತಿದ್ದರು. ಆ ಸಂದರ್ಭದಲ್ಲಿ ನನ್ನ ತಂದೆಯ ಜೊತೆ ನನ್ನ ತಾಯಿ ಮತ್ತು ನಾವೇಲ್ಲರೂ ಇದ್ದೆವು. ನಾನು ಆ ಸಮಯದಲ್ಲಿ ಬೆಂಗಳೂರಿನಲ್ಲಿ ನನ್ನ ತಂದೆಯ ಜೊತೆ ವಾಸ ಮಾಡುತ್ತಿದ್ದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಬೆಂಗಳೂರಿನಲ್ಲಿ ನನ್ನ ತಮ್ಮ ಸುರೇಶ ಮತ್ತು ಒಂದನೇ ಎದುರುದಾರಳ ಜೊತೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ವಿದ್ಯಾಭ್ಯಾಸ ಮುಗಿಸಿಕೊಂಡು ಕೆಲಸಕ್ಕೆ ಸೇರಿದಾಗಿನಿಂದ ಮತ್ತು ಕೆಲಸದಿಂದ ನಿವೃತ್ತಿಯಾಗುವ ತನಕ ಬೆಂಗಳೂರಿನಲ್ಲಿ ಮಾಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಒಂದನೇ ಅರ್ಜಿದಾರ ಟ್ರಸ್ಟನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು.

**2008** ರಲ್ಲಿ ನನ್ನ ತಂದೆ ತೀರಿಕೊಂಡಿದ್ದು, ಅದಕ್ಕಿಂತ ಹಿಂದೆ ಊರಿನ ಹಿರಿಯರೆಲ್ಲಾ ನನ್ನ ತಂದೆಯನ್ನು ಮತ್ತು ಸುರೇಶನನ್ನು ಒಂದನೇ ಅರ್ಜಿದಾರ ಟ್ರಸ್ಟನ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳಲು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರ ಟ್ರಸ್ಟನ್ನು ನನ್ನ ತಂದೆಗೆ ನೋಡಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಅದರ ವ್ಯವಹಾರವನ್ನು ಸುರೇಶನೇ ನೋಡಿಕೊಳ್ಳುವ ಬಗ್ಗೆ ಬಾಯಿಮಾತಿನಲ್ಲಿ ತೀರ್ಮಾನ ಮಾಡಿದ್ದರು ಮತ್ತು ಸದರಿ ತೀರ್ಮಾನದಂತೆ ಸುರೇಶನೇ ಒಂದನೇ ಅರ್ಜಿದಾರ ಟ್ರಸ್ಟನ ವ್ಯವಹಾರವನ್ನು ನೋಡಿಕೊಳ್ಳುತಿದ್ದ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಒಂದನೇ ಅರ್ಜಿದಾರ ಟ್ರಸ್ಟನ ವ್ಯವಹಾರವನ್ನು ಸುರೇಶನೇ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ.

ಈಗ ತೋರಿಸಿದ ನಿಪಿ-**2** ದಾಖಲೆಯಲ್ಲಿ ಒಂದನೇ ಅರ್ಜಿದಾರ ಟ್ರಸ್ಟಿನ ಅನುವಂಶೀಕ ಏಕಮಾತ್ರ ಟ್ರಸ್ಟಿ ಎಂದು ನನ್ನ ತಂದೆಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ನಿಪಿ-**2** ದಾಖಲೆಯಲ್ಲಿ ಹೇಳಿರುವ ಎಸ್ ಗೌರಮ್ಮ ನನ್ನ ತಾಯಿ ಎಂದರೆ ಸರಿ. ಆರ್ ಸುರೇಶ ಎಂದರೆ ನನ್ನ ತಮ್ಮ ಎಂದರೆ ಸರಿ. ಈಗ ತೋರಿಸಿದ ನಿಪಿ-**2** ದಾಖಲೆಯ ಕಾಲಂ **3** ರಲ್ಲಿ ನನ್ನ ತಾಯಿ ಗೌರಮ್ಮ, **4** ನೇ ಅರ್ಜಿದಾರಳಾದ ರಾಜೇಶ್ವರಿ ಮತ್ತು ನನ್ನ ತಮ್ಮ ಸುರೇಶನ ಹೆಸರು ಇದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ಮತ್ತು **3** ನೇ ಅರ್ಜಿದಾರಳ ಹೆಸರು ನಮೂದು ಇಲ್ಲ ಎಂದರೆ ಸರಿ. ನನ್ನ ತಂದೆಗೆ ನನ್ನ ಮೇಲೆ ವಿಶ್ವಾಸ ಇದ್ದಿಲ್ಲ ಮತ್ತು ಈ ಕಾರಣಕ್ಕೆ ನಿಪಿ-**1** ರಂತೆ ಟ್ರಸ್ಟ ಡಿಡ್ ಮಾಡುವ ಸಂದರ್ಭದಲ್ಲಿ ಟ್ರಸ್ಟಿಯಾಗಿ ನನ್ನ ಮತ್ತು ಮೂರನೇ ಅರ್ಜಿದಾರಳ ಹೆಸರು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆದರೆ ನಿಪಿ-**1**

ದಾಖಲೆಯಲ್ಲಿ ನನ್ನ ಮತ್ತು ಮೂರನೇ ಅರ್ಜಿದಾರಳ ಹೆಸರು ಇಲ್ಲ ಎಂದರೆ ಸರಿ. ನಿಪಿ-1 ದಾಖಲೆಯಲಲ್ಲಿ ನನ್ನ ಮತ್ತು ಮೂರನೇ ಅರ್ಜಿದಾರಳ ಹೆಸರು ಇಲ್ಲ ಎನ್ನುವ ವಿಷಯ ನನಗೆ ಮೊದಲಿನಿಂದ ಗೊತ್ತು ಎಂದರೆ ಸರಿಯಲ್ಲ.

1 ನೇ ಅರ್ಜಿದಾರ ಟ್ರಸ್ಟ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟುಕೊಂಡಿರುತ್ತದೆ ಎಂದರೆ ಸರಿ. ಸದರಿ ಟ್ರಸ್ಟಗೆ ಸಂಬಂಧಪಟ್ಟ ಹಣಕಾಸಿನ ಬಗ್ಗೆ ಬ್ಯಾಂಕ್ ಖಾತೆ ಇದೆ ಎಂದರೆ ಸರಿ. 1 ನೇ ಅರ್ಜಿದಾರ ಟ್ರಸ್ಟಗೆ ಸಂಬಂಧಪಟ್ಟಂತೆ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ರಾಮದುರ್ಗ ಶಾಖೆಯಲ್ಲಿ ಎರಡು ಬ್ಯಾಂಕ ಖಾತೆಗಳು ಇರುತ್ತವೆ. ನನ್ನ ತಂದೆಯ ಕಾಲದಿಂದಲೂ ಸದರಿ ಎರಡು ಬ್ಯಾಂಕ ಖಾತೆಗಳು ಇವೆ ಎಂದರೆ ಸರಿ. 1 ನೇ ಅರ್ಜಿದಾರಳ ಟ್ರಸ್ಟ ಪ್ರಾರಂಭವಾದಾಗಿನಿಂದ ಸದರಿ ಟ್ರಸ್ಟ ಎಲ್ ಕೆ ಜಿ ಯಿಂದ 10 ನೇ ತರಗತಿಯವರೆಗೆ ಸ್ಕೂಲ್‌ನ್ನು ನಡೆಸುತ್ತಿತ್ತು ಎಂದರೆ ಸರಿ. ಆದರೆ ಟ್ರಸ್ಟ ಪ್ರಾರಂಭವಾಗಿ ನಂತರ 3-4 ವರ್ಷಗಳ ನಂತರದಿಂದ ಈ ತನಕ ಸದರಿ ಟ್ರಸ್ಟ ಡಿ ಎಡ್ ಮತ್ತು ಬಿ ಎಡ್ ಕಾಲೇಜುಗಳ್ನು ನಡೆಸಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರ ಟ್ರಸ್ಟಗೆ ಸಂಬಂಧಪಟ್ಟ ಬ್ಯಾಂಕ ಖಾತೆಯ ದಾಖಲೆಗಳನ್ನು ನಾವು ಈ ಕೇಸನಲ್ಲಿ ಹಾಜರು ಪಡಿಸಿಲ್ಲ. ಆ ರೀತಿ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ರೀತಿಯ ತೊಂದರೆಗಳು ಇಲ್ಲ. 1 ನೇ ಅರ್ಜಿದಾರ ಟ್ರಸ್ಟಗೆ ಸ್ಕೂಲ್ ಮತ್ತು ಕಾಲೇಜುಗಳನ್ನು ನಡೆಸುತ್ತಿರುವುದರಿಂದ ಪ್ರತಿವರ್ಷ ಅಂದಾಜು ರೂ. 60-80 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ಆ ರೀತಿ ಆದಾಯ ಇದ್ದರೂ ಸಹ ಆದಾಯ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರ ಟ್ರಸ್ಟಗೆ ವಾರ್ಷಿಕ ರೂ. 60- 80 ಲಕ್ಷದಷ್ಟು ಆದಾಯ ಇದೆ ಮತ್ತು ಸದರಿ ಟ್ರಸ್ಟಗೆ ಸಂಬಂಧಪಟ್ಟ ಬ್ಯಾಂಕ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದರೇ ಆ ರೀತಿ ಆದಾಯ ಇದೆ ಎಂಬ ವಿಷಯ ತಿಳಿದು ಬರುತ್ತದೆ ಎನ್ನುವ ಕಾರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

Misc 63/2022
PW-1

(ಈ ಹಂತದಲ್ಲಿ 1 ರಿಂದ 4 ನೇ ಎದುರುದಾರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ವಿಚಾರಣೆಯನ್ನು, ಮುಂದಿನ ದಿನಾಂಕದಂದು ಪಾಟೀ ಸವಾಲಿಗೆ ಒಳಪಡಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.